## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಪ್ರತಾಪಸಿಂಹ ನಾಯಕ್ ರವರ ನಿಯಮ 72ಕ್ಕೆ ಕಂದಾಯ ಸಚಿವರ ಹೇಳಿಕೆ

**ಪ್ರಶ್ನೆ**: "ಭೂಮಾಲೀಕರು ತಮ್ಮ ಜಮೀನಿನ ಸಂಪೂರ್ಣ ಹಾಗೂ ಅರ್ಹ ಭೂಮಾಲಿಕತ್ವ ಹೊಂದಿದ್ದಾಗೂ, ಕಂದಾಯ ಇಲಾಖೆಯ ಆರ್‌ಟಿಸಿಯ (ಪಹಣಿ) ಕಾಲಂ 9 ಮತ್ತು 6 ರಲ್ಲಿ "ಸರಕಾರ" ಎಂದು ತಪ್ಪಾಗಿ ನಮೂದಾಗಿರುತ್ತದೆ. ಈ ರೀತಿ ಸರಕಾರ ಎಂದು ನಮೂದು ಮಾಡಲು ಕರ್ನಾಟಕ ಭೂ ಸುಧಾರಣಾ ಕಾಯಿದೆ, ಇನಾಮ್ ಭೂ ರದ್ಧತಿ ಕಾಯಿದೆ, ಕರ್ನಾಟಕ ಭೂಕಂದಾಯ ಕಾಯಿದೆ ಅಡಿಯ ನಿಯಮಗಳು ಮತ್ತು ಕಾಯಿದೆಗಳಡಿಯಲ್ಲಿ ಕೆಲವು ಸೀಮಿತ ಪ್ರಕರಣಗಳಿಗೆ ಮಾತ್ರ ಸಮಂಜಸವಾಗಿರುತ್ತದೆ.

ಆದರೆ ಭೂಮಾಲೀಕರು ತಮ್ಮ ಜಮೀನಿನ ಸಂಪೂರ್ಣ ಹಾಗೂ ಅರ್ಹ ಭೂಮಾಲಿಕತ್ವ ಹೊಂದಿರುವ ಹಲವಾರು ಪ್ರಕರಣಗಳಲ್ಲಿ ಭೂಮಾಲೀಕರ ಹೆಸರು ನಮೂದಾಗುವ ಬದಲು ಸರಕಾರ" ಎಂದು ಕಣ್ತಪ್ಪಿನಿಂದಾಗಿಯೋ ಅಥವಾ ಮಾಹಿತಿ ಕೊರತೆಯಿಂದಾಗಿಯೋ ತಪ್ಪಾಗಿ ನಮೂದು ಮಾಡಲಾಗಿದೆ. ಸದರಿ ತಪ್ಪು ನಮೂದನ್ನು ಸರಿಪಡಿಸಲು ಹಲವಾರು ಭೂಮಾಲೀಕರು ಸತತವಾಗಿ ಮನವಿ ಮಾಡಿದರೂ, ಇದುವರೆಗೂ ಈ ಕುರಿತು ಯಾವುದೇ ಸೂಕ್ತ ಬದಲಾವಣೆ ಆದೇಶ ಆಗಿರುವುದಿಲ್ಲ. ಈ ಕಾರಣದಿಂದಾಗಿ ಜಮೀನಿನ ಸಂಪೂರ್ಣ ಹಾಗೂ ಅರ್ಹ ಭೂಮಾಲಿಕತ್ವ ಹೊಂದಿದ್ದರೂ ಹಲವಾರು ಭೂಮಾಲೀಕರು ತಮ್ಮ ಜಮೀನನ್ನು ಖರೀದಿಗೆ ನೀಡಲು, ಸರ್ವೆ ಮಾಡಿಸಲು, ಬೋರ್‌ವೆಲ್ ಕೊರೆಸಲು, ವಿದ್ಯುತ್ ಸಂಪರ್ಕ ಪಡೆಯಲು ಸಾಧ್ಯವಾಗದಿರುವುದು ಮತ್ತು ಬೆಳೆಸಾಲ, ಬೆಳೆವಿಮೆ ಸೇರಿದಂತೆ ಸರಕಾರದ ಹಲವಾರು ಸವಲತ್ತುಗಳಿಂದ ಇಂದಿಗೂ ವಂಚಿತರಾಗಿರುವ ಗಂಭೀರ ಸಮಸ್ಯೆ ಕುರಿತು ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಉತ್ತರ:** ಪಹಣಿ ಕಾಲಂ 9 ಮತ್ತು 6 ರಲ್ಲಿ ಅರ್ಹ ಭೂಮಾಲೀಕರ ಹೆಸರಿನ ಬದಲಿಗೆ ತಪ್ಪಾಗಿ ಸರ್ಕಾರ ಎಂದು ನಮೂದಾಗಿದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ ಪಹಣಿ ತಿದ್ದುಪಡಿಗೆ ಕ್ರಮವಹಿಸಲು ಉಪವಿಭಾಗಾಧಿಕಾರಿಗಳಿಗೆ ಆರ್.ಟಿ.ಸಿ ಮ್ಯಾನೇಜ್‌ಮೆಂಟ್ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.

ಸಂಖ್ಯೆ:ಕಂಇ 64 ಎಂಆರ್‌ಆರ್ 2023

(ಆರ್. ಅಶೋಕ)
ಕಂದಾಯ ಸಚಿವರು